ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Saturday, the 14th March 1981, Phalguna 23, 1902 S.E.

The House met in the Assembly Chamber, Vidhana Soudha at Nine of the Clock.

[MR. SPEAKER (Sri K. H. RANGANATH) in the Chair].

STARRED QUESTIONS
(to which oral Answers were given)

ಪ್ರಶ್ನೆ ೮೫ (೫) ಮಾನ್ಯ ಸದಸ್ಯರು ಗೈರು ಹಾಜರಿ.

ಪ್ರಶ್ನೆ ೮೬ (೬೬) —,,—

Encroachment upon Soppinabetta in Malnad area

95 SRI SHEERNALY CHANDRASHEKAR (Hosanagar).— Will the Minister for Forest and Mines and Geology be pleased to state.—

(a) whether the Government is aware that the Forest Department is encroaching upon Soppinabetta in Malnad Area ;

(b) whether Government is aware that due to that encroachment the ryots in Malnad area are put to great difficulty because it is very necessary for them to collect green leaves for garden Wet lands ?

SRI G. MADEGOWDA (Minister for Forest and Mines and Geology).—

(a) No.

(b) Does not arise in view of the reply to clause (a) above.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಸ್ವಾಮಿ, ಶಾಸನ ಸಭೆಯಲ್ಲಿ ಶಾಸಕರು ಪ್ರಶ್ನೆ ಕೇಳುವಾಗ ನಾವು ಖಚಿತವಾದಂಥ ಅಭಿಪ್ರಾಯವನ್ನಿಟ್ಟುಕೊಂಡು ಕೇಳುತ್ತೇವೆ. ವಿಷಯ ಹೇಗೆ ನಡೆದಿರುತ್ತದೆ ಎಂದು ನಮಗೆ ಗೊತ್ತಿರುತ್ತದೆ.

ಅಧ್ಯಕ್ಷರು.— ಹಾಗಾದರೆ ಪ್ರಶ್ನೆ ಹಾಕಬಾರದು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಎಲ್ಲಾ ಪ್ರಶ್ನೆಗಳಿಗೆ ಇಲ್ಲ, ಇಲ್ಲ ಎಂದು ಉತ್ತರ ಕೊಡುವುದಾದರೆ, ಪರಿಶೀಲನೆ ಮಾಡಿ ಉತ್ತರ ಕೊಟ್ಟಿದ್ದೀರಾ ಹೇಗೆ ?

ಶ್ರೀ ಜಿ. ಮಾದೇಗೌಡ.— ನಮ್ಮ ಇಲಾಖೆಯಿಂದ ಏನು ಇನ್‌ಫರ್ಮೇಷನ್ ಇದೆ ಅದರ ಪ್ರಕಾರ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ನಮ್ಮ ನೆರವಿಗೆ ತಾವು ಬರಬೇಕು. ಪಂಲೆನಾಡಿನಲ್ಲಿ ಹೊಸನಗರ, ತೀರ್ಥಹಳ್ಳಿ, ಸಾಗರ, ಸೊರಬ ತಾಲ್ಲೂಕುಗಳಲ್ಲಿ ಬಾಗಾಯ್ತು ಜಮೀನಿದೆ. ಅದರ ಮೇಲೆ ಅರಣ್ಯ ಜಮೀನು ಇದೆ. ಆಗಾಯಿತ್ತಿನಿಂದ ರೈತರು ಸೊಪ್ಪನ್ನು ಕಡಿಯಲಿಕ್ಕೆ ಹೋಗುತ್ತಾರೆ. ಈಗ ಅರಣ್ಯ ಇಲಾಖೆಯವರು ಅತಿಕ್ರಮವಾಗಿ ಸೊಪ್ಪನ್ನು ಕೊಯ್ಯಲಿಕ್ಕೆ ಬಿಡದೆ ಕತ್ತಿ ಸಮೇತ ಕೆತ್ತು ಕೊಳ್ಳುತ್ತಿದ್ದಾರೆ ಆದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ತಾವು ದಯವಿಟ್ಟು ಇದನ್ನು ಎಗ್ಸಾಮಿನ್ ಮಾಡಿಸುತ್ತೀರಾ ?

ಶ್ರೀ ಜಿ. ಮಾದೇಗೌಡ —ಮಾನ್ಯ ಅಧ್ಯಕ್ಷರೆ,ಮಲೆನಾಡಿನ ಪ್ರದೇಶದಲ್ಲಿ ಅದರಲ್ಲೂ ಉತ್ತರ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಈ ತರಹವಾದಂಥ ಜಮೀನುಗಳಿವೆ. ಸೊಪ್ಪಿನ ಬೆಟ್ಟಗಳು ಇರತಕ್ಕಂಥ ಜಮೀನುಗಳಿವೆ. ನೀರಾವರಿ ಭತ್ತದ ಗದ್ದೆಗಳಿಗೆ, ಅಡಿಕೆ ತೋಟಗಳಿಗೆ ಸೊಪ್ಪನ್ನು ಕಡಿಯತಕ್ಕ ಪದ್ಧತಿ ಇದೆ. ಈ ಜಮೀನುಗಳು ರೆವಿನ್ಯೂ ಡಿಪಾರ್ಟ್‌ಮೆಂಟ್‌ನ ಆಧೀನದಲ್ಲಿರತಕ್ಕ ಜಮೀನುಗಳು. ರೈತರಿಗೆ ಯಾವ ವಿಧವಾದಂಥ ಹಕ್ಕು ಇದೆ, ಅದಕ್ಕೆ ನಮ್ಮ ಇಲಾಖೆಯವರು ಏನೂ ತೊಂದರೆ ಮಾಡಿಲ್ಲ, ಯಾವ ವಿಧವಾದಂಥ ಒತ್ತುವರಿ ಮಾಡಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಬಾಗಾಯ್ತು ಬೇಸಾಯ ಮಾಡುವಾಗ ಒಂದು ಆಣೆ ಖಾತೆ ಕಾನು ಇದ್ದೇ ಇರುತ್ತದೆ. ರೈತರು ಸೊಪ್ಪನ್ನು ಕಡಿಯಲಿಕ್ಕೆ ಪ್ರವೇಶ ಮಾಡುವ ಹಾಗಿಲ್ಲ, ಅರಣ್ಯ ಇಲಾಖೆಯವರು ಕತ್ತಿಯನ್ನು ಕಸಿದುಕೊಳ್ಳುತ್ತಾರೆ, ಆದುದರಿಂದ ಇದರ ಪರಿಹಾರವಾಗಿ ಸೂಕ್ತವಾದ ಆದೇಶ ನೀಡುತ್ತೀರಾ ?

ಶ್ರೀ ಜಿ. ಮಾದೇಗೌಡ.— ಆದೇಶ ನೀಡಬೇಕಾದ ಪ್ರಮೇಯ ಇಲ್ಲ. ನಾವು ಯಾವುದೇ ವಿಧವಾದಂಥ ಅಡ್ಡಿ ಮಾಡುತ್ತಾ ಇಲ್ಲ ಎಂದು ಹೇಳುತ್ತಿದ್ದೇನೆ.

MR. SPEAKER.— You will have to read the revenue law about it. ಸೊಪ್ಪಿನ ಬೆಟ್ಟದ ವಿಚಾರ ಓದಿ. ರೆವಿನ್ಯೂ ಲಾ ಅಭ್ಯಾಸ ಮಾಡಿ. The hon. Member comes from Malnad area. He is a lawyer also. He should know that 'Soppina Betta' is reserved for Malnad ryots.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಸೊಪ್ಪಿನ ಬೆಟ್ಟದ ರೈಟ್ ಏನಿತ್ತು ಆ ರೈಟ್ ಖಂಡಿತವಾಗಿಯೂ ಹೋಗುತ್ತಾ ಇದೆ. ಇವತ್ತು ಏನಾಗುತ್ತಿದೆ ಎಂದರೆ ಅಲ್ಲಿ ಗಾರ್ಡ್‌ಗಳಿಗೂ ಮತ್ತು ಅಲ್ಲಿ ಸೊಪ್ಪನ್ನು ಕಡಿದುಕೊಂಡುಹೋಗುತ್ತಿರುವವರಿಗೂ ಘರ್ಷಣೆಯಾಗುತ್ತಿದೆ. ಇದಕ್ಕೆ ತಾವು ಸೂಕ ಪರಿಹಾರವನ್ನು ಕಂಡು ಹಿಡಿಯುತ್ತೀರಾ ?

ಶ್ರೀ ಜಿ. ಮಾದೇಗೌಡ.—ಸೊಪ್ಪನ್ನು ತೆಗೆದಂಕೊಂಡು ಹೋಗುವುದಕ್ಕೆ ನಮ್ಮದೇನೂ ಅಡ್ಡಿಯಿಲ್ಲ ಮತ್ತೆ ಅಲ್ಲಿ ದನಕರುಗಳನ್ನು ಮೇಯಿಸಿಕೊಂಡು, ಬಣಗಿ ಬಿದ್ದಿರತಕ್ಕ ಸೌದೆ, ಕಡ್ಡಿಗಳನ್ನು ಸ್ವಂತಕ್ಕಾಗಿ ತೆಗೆದುಕೊಂಡು ಹೋಗಬಹುದು, ಮಾರುವುದಕ್ಕೆ ಅಲ್ಲ. ಕೆಲವರು ಏನು ಮಾಡುತ್ತಾರೆ ಎಂದರೆ ಸೊಪ್ಪಿನ ಹೆಸರಿನಲ್ಲಿ ಮರಗಳನ್ನೇ ಕಡಿದುಕೊಂಡು ಹೋಗುತ್ತಾರೆ. ಅಂಥಾದ್ದಕ್ಕೆ ಮಾತ್ರ ಅಡ್ಡಿ ಪಡಿಸುತ್ತಾರೆಯೇ ವಿನಃ ಸೊಪ್ಪನ್ನು ತೆಗೆದುಕೊಂಡು ಹೋಗುವವರಿಗೆ ಅಡ್ಡಿಪಡಿಸಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.— ಇಲ್ಲ ಸ್ವಾಮಿ, ಅಲ್ಲಿ ಸೊಪ್ಪನ್ನು ತೆದುಕೊಂಡು ಹೋಗುವರಿಗೆ ಕೆಲವು ಸಂದರ್ಭಗಳಲ್ಲಿ ಅಡ್ಡಿ ಪಡಿಸುತ್ತಿದ್ದಾರೆ.

ಅಧ್ಯಕ್ಷರು.— ಸ್ಪೆಸಿಫಿಕ್ ಆಗಿ ಎಲ್ಲಿಯಾದರೂ ಆ ತರಹ ನಡೆದಿದ್ದರೆ ಪತ್ರ ಬರೆಯಿರಿ, ಇಲ್ಲ ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಹೊಸನಗರ ತಾಲ್ಲೂಕಿನ ನಿಟ್ಟೂರಿನಲ್ಲಿ, ಮತ್ತು ತೀರ್ಥಹಳ್ಳಿಯ ಹೆಬ್ಬಾಗಿಲುವಿನಲ್ಲಿ ಆ ರೀತಿ ನಡೆಯುತ್ತಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸರಿಯಾದ ಆದೇಶವನ್ನು ಕೊಡುತ್ತೀರಾ ?

ಶ್ರೀ ಜಿ. ಮಾದೇಗೌಡ.— ಅಧ್ಯಕ್ಷರೇ, ನಾನು ಮೊದಲೇ ಹೇಳಿದ ಹಾಗೆ ಸೊಪ್ಪನ್ನು ತೆಗೆದು ಕೊಂಡು ಹೋಗುವವರಿಗೆ ಅಡ್ಡಿಪಡಿಸುವುದಿಲ್ಲ., ದನಕರುಗಳನ್ನು ಮೇಯಿಸಬಹುದು, ಅದನ್ನು ಬಿಟ್ಟು

ಮರವನ್ನೇ ಕಡಿದುಕೊಂಡು ಹೋದರೆ ಅಡ್ಡಿಪಡಿಸುತ್ತಾರೆಯೇ ವಿನಃ ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಇಂಥಾ ಕಡೆ ಅಡ್ಡಿ ಪಡಿಸುತ್ತಿದ್ದಾರೆ ಎಂದು ಹೇಳುತಿ ರುವುದರಿಂದ, ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಅಧ್ಯಕ್ಷರು.— ಶ್ರೀ ವಿ. ರಾಮಚಂದ್ರ ಆ್ಯಬ್‌ಸೆಂಟ್.

Arrangement for Mahamastakabhiseka held on 1981 at Sravana-belagola.

160 SRI H. GANGADHARAN (Krishnaraja)— Will the Minister of State for Marketing and Muzrai be pleased to state.—

(a) whether the Government has made any special arrangement for Mahamastakabhiseka to be held on 1981 at Sravanabelagola.

(b) is there any Committee of Trust created for the purpose.

(c) is there any master plan prepared ? If so, will it be placed before the House for consideration ?

SRI SUDHENDRA RAO KASBE (Minister of State for Marketing and Muzrai).—

(a) Yes.

(b) Yes. Two Committees one at State Level and another at District Level.

(c) No.

SRI M. C. BASAPPA (on behalf of Sri H. Gangadharan).— Sir, to question (b) is there any Committee of Trust created for the purpose, the Hon. Minister has stated "Yes. Two Committees one at the State level and another at District level." I want to know whether there are two Committee of trustees, if so, what are their functions ?

ಶ್ರೀ ಸುಧೀಂದ್ರರಾವ್ ಕಸಬೆ.—ಅಧ್ಯಕ್ಷರೇ, ರಾಜ್ಯ ಮಟ್ಟದ ಒಂದು ಕಮಿಟಿ ಇದೆ, ಮತ್ತೊಂದು ಸ್ಥಳೀಯ ಕಮಿಟಿ ಎಂದು ಇದೆ. ರಾಜ್ಯ ಮಟ್ಟದ ಸಮಿತಿಯಲ್ಲಿ ಮುಖ್ಯ ಮಂತ್ರಿಗಳವರು ಮತ್ತು ರಾಜ್ಯದ ಮುಖ್ಯ ಕಾರ್ಯದರ್ಶಿಗಳವರು ಮತ್ತು ಉನ್ನತ ಸದಸ್ಯರುಗಳನ್ನು ಅಲ್ಲಿ ಹಾಕಿದ್ದೇವೆ ಮತ್ತೆ ಸ್ಥಳೀಯ ಸಮಿತಿ ಏನಿದೆ ಅದು ಜೈನ ಜನಾಂಗಕ್ಕೆ ಸೇರಿದಂಥ ಸಮಿತಿ, ಅದು ಅಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುತ್ತದೆ. ರಾಜ್ಯ ಮಟ್ಟದ ಸಮಿತಿಯಲ್ಲಿ ತೆಗೆದುಕೊಂಡಂಥ ತೀರ್ಮಾನಗಳಂತೆ ಆ ಸಮಿತಿ ಅಲ್ಲಿ ಇಂಪ್ಲಿಮೆಂಟ್ ಮಾಡುತ್ತದೆ.

ಶ್ರೀ ಎಂ. ಸಿ. ಬಸಪ್ಪ.— ಅಧ್ಯಕ್ಷರೇ, ಈ ಸಮಾರಂಭವನ್ನು ನಡೆಸುವುದಕ್ಕೆ ಒಂದು ಟ್ರಸ್ಟನ್ನು ಮಾಡಿ ಮತ್ತೆ ಮುಂದೆ ಅದರ ಆಗುಹೋಗುಗಳನ್ನು ನೋಡಿಕೊಳ್ಳುವುದಕ್ಕೆ ಈ ಟ್ರಸ್ಟಿಯನ್ನು ಕ್ರಿಯೇಟ್ ಮಾಡಿದ್ದೀರಾ ಎಂದು ನಾನು ಪ್ರಶ್ನೆಯನ್ನು ಮಾನ್ಯ ಮಂತ್ರಿಗಳವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಸುಧೀಂದ್ರರಾವ್ ಕಸಬೆ.— ಮುಂದಿನ ಆಗು ಹೋಗುಗಳನ್ನು ಪರ್ಮನೆಂಟ್ ಕಮಿಟಿಯಾದ ಸ್ಟೇಟ್ ಲೆವೆಲ್ ಕಮಿಟಿ ನೋಡಿಕೊಳ್ಳುತ್ತದೆ. ಸ್ಟೇಟ್ ಲೆವೆಲ್ ಕಮಿಟಿ ಅದು ತಾತ್ಕಾಲಿಕವಾದ ಕಮಿಟಿ.